ಕರ್ನಾಟಕ ವಿಧಾನ ಪರಿಷತ್ತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1715**
ಮಾನ್ಯ ಸದಸ್ಯರ ಹೆಸರು	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	23/03/2020
ಉತ್ತರಿಸುವ ಸಚಿವರು	ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ ಸಂ..	ಪ್ರಶ್ನೆಗಳು	ಉತ್ತರಗಳು
ಅ)	ಬೀದರ್ ಜಿಲ್ಲೆಯ ಬ್ರೀಮ್ಸ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಶುಶ್ರೂಷಕಿಯರು (ನರ್ಸ್) ಹಾಗೂ "ಡಿ" ಗ್ರೂಪ್ ನೌಕರರ ಮಂಜೂರಾತಿಯಾದ ಹುದ್ದೆಗಳು ಎಷ್ಟು;	ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಮತ್ತು ಆಸ್ಪತ್ರೆಗೆ ಒಟ್ಟು 337 ಶುಶ್ರೂಷಕರ ಹುದ್ದೆಗಳು ಹಾಗೂ 187 ಗ್ರೂಪ್ 'ಡಿ' ಹುದ್ದೆಗಳು ಮಂಜೂರಾಗಿರುತ್ತವೆ.
ಆ)	ಅದರಲ್ಲಿ ಖಾಯಂ ಇರುವವರ ಸಂಖ್ಯೆ; ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡ ನೌಕರರ ಸಂಖ್ಯೆ ಎಷ್ಟು; ಅವರನ್ನು ನೇಮಕಾತಿ ಮಾಡಲು ಯಾವ ನಿಯಮವನ್ನು ಅನುಸರಿಸಲಾಗಿದೆ; ಹೊರಗುತ್ತಿಗೆಯಿಂದ ನೇಮಕ ಮಾಡಲು ಪತ್ರಿಕಾ ಜಾಹಿರಾತು ಹೊರಡಿಸಲಾಗಿದೆಯೇ; ಮತ್ತು ನೇಮಕಾತಿಗಾಗಿ ಯಾವ ಪ್ರಕ್ರಿಯೆಯನ್ನು ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)	(see table below)

ಬ್ರಿಮ್ಸ್ ಕಾಲೇಜು & ಆಸ್ಪತ್ರೆ

ಕ್ರ.ಸಂ	ಹುದ್ದೆಯ ಹೆಸರು	ಮಂಜೂರಾತಿ	ಖಾಯಂ	ಗುತ್ತಿಗೆ ಆಧಾರ	ಹೊರ ಗುತ್ತಿಗೆ	ಖಾಲಿ
1	ಶುಶ್ರೂಷಕರು	337	272	-	13	52
2	ಗ್ರೂಪ್ "ಡಿ"	187	19	-	176	11

ಬೀದರ್ ಸಂಸ್ಥೆಯ ಕಾಲೇಜು ಮತ್ತು ಆಸ್ಪತ್ರೆಗೆ 2005-06ರಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಒಟ್ಟು 272 ಶುಶ್ರೂಷಕರನ್ನು ಕೆ.ಇ.ಎ. ಪರೀಕ್ಷೆ ಮುಖಾಂತರ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಹಾಗೂ 13 ಶುಶ್ರೂಷಕರನ್ನು ವಿವಿದೋದ್ದೇಶ ಸಹಕಾರ ಸಂಘದಿಂದ ಜಿಲ್ಲಾಧಿಕಾರಿಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ.

ಗ್ರೂಪ್-ಡಿ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ 18 ಗ್ರೂಪ್ ಡಿ ನೌಕರರು ನೇಮಕಾತಿ ಹೊಂದಿದ್ದು, ಕಿಮ್ಸ್ ಸಂಸ್ಥೆಯಿಂದ ಒಬ್ಬರು ಗ್ರೂಪ್-ಡಿ ನೌಕರರು ವರ್ಗಾವಣೆಗೊಂಡಿರುತ್ತಾರೆ. ಹಾಗೂ 176 ಗ್ರೂಪ್-ಡಿ ಸಿಬ್ಬಂದಿಗಳನ್ನು ವಿವಿದೋದ್ದೇಶ ಸಹಕಾರ ಸಂಘದಿಂದ ಜಿಲ್ಲಾಧಿಕಾರಿಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ.

ಕ್ರ ಸಂ..	ಪ್ರಶ್ನೆಗಳು	ಉತ್ತರಗಳು
ಇ)	ಬ್ರೀಮ್ಸ್ ಕಾಲೇಜಿನಲ್ಲಿ ಎರವಲು ಸೇವೆಯ ಮೇಲೆ ಬಂದ ನೌಕರರು ಅವ್ಯವಹಾರದಲ್ಲಿ ಪಾಲ್ಗೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಆ ನೌಕರರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಸಂಪೂರ್ಣ ವಿವರ ನೀಡುವುದು)	ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖರೀದಿ, ಸಿಬ್ಬಂದಿ ನೇಮಕ ಮತ್ತು ಇತರೆ ಕಾಮಗಾರಿ, ಖರೀದಿಗಳಲ್ಲಿ ಸುಮಾರು ರೂ.18.00 ಕೋಟಿಗಳ ಹಣದ ಅವ್ಯವಹಾರ ನಡೆದಿರುವುದಾಗಿ ಭ್ರಷ್ಟಾಚಾರ ನಿಗ್ರಹದಳದಲ್ಲಿ ದೂರು ದಾಖಲಾದ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಆಕುಕ 122 ಎಂಎಸ್ಎಫ್ 2018, ದಿನಾಂಕ:29-06-2018 ರನ್ವಯ ಈ ಕೆಳಕಂಡ ಸಿಬ್ಬಂದಿಗಳ ವಿರುದ್ಧ ಮೊಕದ್ದಮೆ ದಾಖಲಿಸಿ ತನಿಖೆ ಕೈಗೊಳ್ಳಲು ಭ್ರಷ್ಟಾಚಾರ ನಿಗ್ರಹದಳಕ್ಕೆ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ.
ಈ)	ಎರವಲು ಸೇವೆಯ ಮೇಲೆ ಬಂದ ನೌಕರರು ಅದೇ ಸ್ಥಳದಲ್ಲಿ ಮುಂದುವರಿಯಲು ಕಾರಣವೇನು; ಅದೇ ಸ್ಥಳದಲ್ಲಿ ಮುಂದುವರಿಸಿದ್ದು ಯಾವ ಉದ್ದೇಶಕ್ಕಾಗಿ?	1. ಡಾ:ಚನ್ನಣ್ಣ ಸಿ, ಹಿಂದಿನ ನಿರ್ದೇಶಕರು. 2. ಡಾ: ಶಿವಕುಮಾರ್ ಶೆಟಕಾರ, ಹಿಂದಿನ ವೈದ್ಯಕೀಯ ಅಧೀಕ್ಷಕರು. 3. ಶ್ರೀ ಆನಂದಸಾಗರ ರೆಡ್ಡಿ, ಹಿಂದಿನ ಸಿ.ಇ.ಓ. 4.ಶ್ರೀಮತಿ ಅನುಸೂಯಾ, ಸಹಾಯಕ ಆಡಳಿತಾಧಿಕಾರಿಗಳು 5. ಶ್ರೀ ಬಾಬು ಕೋಟೆ, ಕಛೇರಿ ಅಧೀಕ್ಷಕರು. 6. ಶ್ರೀ ಪ್ರಕಾಶ ಶರಣಪ್ಪ ಮಡಿವಾಳ, ಕಛೇರಿ ಅಧೀಕ್ಷಕರು 7. ಶ್ರೀ ಪ್ರಕಾಶ ಮಾಳಗೆ, ಪ್ರ.ದ.ಸ

8. ಶ್ರೀಮತಿ ವರ್ಷ ದೇಶಮುಖ್,ಪ್ರ.ದ.ಸ
9. ಶ್ರೀ ಮಾಚೆ ಕಲ್ಲಪ್ಪ, ನಿವೃತ್ತ ಕಛೇರಿ ಅಧೀಕ್ಷಕರು
10. ಶ್ರೀ ಶಿವಾಜಿ, ದ್ವಿ.ದ.ಸ.

ಸದರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ಕೈಗೊಳ್ಳಲು ಶ್ರೀ ನಿಶ್ಚಿತ್ ವಿ.ಡಿ. ಆರ್ಥಿಕ ಸಲಹೆಗಾರರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಇವರನ್ನು ದಿನಾಂಕ: 19/02/2018ರ ಅಧಿಸೂಚನೆಯನ್ವಯ ತನಿಖಾಧಿಕಾರಿನ್ನಾಗಿ ನೇಮಿಸಲಾಗಿದ್ದು, ತನಿಖಾಧಿಕಾರಿಗಳು ತನಿಖೆ ಕೈಗೊಂಡು ದಿನಾಂಕ:19/06/2018 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ವರದಿಯನ್ನು ಪರಿಶೀಲಿಸಿದ ನಂತರ ಸರ್ಕಾರದ ವತಿಯಿಂದ ದಿನಾಂಕ: 04/08/2018 ರಂದು ಈ ಕೆಳಕಂಡ ಆರೋಪಿತ ಅಧಿಕಾರಿ/ನೌಕರರಿಗೆ ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಗಿರುತ್ತದೆ.

ಕ್ರ.ಸಂ	ಅಧಿಕಾರಿ/ಸಿಬ್ಬಂದಿ ಹೆಸರು
1	ಡಾ:ಸಿ ಚನ್ನಣ್ಣ- ನಿರ್ದೇಶಕರು
2	ಶ್ರೀ ಆನಂದಸಾಗರ ರೆಡ್ಡಿ, ಮುಖ್ಯ ಆಡಳಿತಾಧಿಕಾರಿ
3	ಡಾ:ಶಿವಕುಮಾರ್ ಶೆಟಕಾರ, ಹಿಂದಿನ ವೈದ್ಯ ಅಧೀಕ್ಷಕರು
4	ಶ್ರೀಮತಿ ಅನುಷಯಾ, ಸಹಾಯಕ ಆಡಳಿತಾಧಿಕಾರಿ
5	ಶ್ರೀ ಪ್ರಕಾಶ ಶರಣಪ್ಪಾ ಮಡಿವಾಳ ,ಕಛೇರಿ ಅಧೀಕ್ಷಕರು
6	ಶ್ರೀ ಬಾಬು ಕೋಟೆ- ಕಛೇರಿ ಅಧಿಕ್ಷಕರು
7	ಶ್ರೀ ಪ್ರಕಾಶ ಮಾಳಗೆ- ಪ್ರಥಮ ದರ್ಜೆ ಸಹಾಯಕರು
8	ಶ್ರೀಮತಿ ವರ್ಷಾ, ಪ್ರಥಮ ದರ್ಜೆ ಸಹಾಯಕರು

ತತ್ಸಂಬಂಧ ಆರೋಪಿತ ಸಿಬ್ಬಂದಿಗಳು ಸಲ್ಲಿಸಿರುವ ಸಮಜಾಯಿಷಿಗಳನ್ನು ಪರಿಶೀಲಿಸಲಾಗುತ್ತಿದೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಿಬ್ಬಂದಿಗಳನ್ನು ಹೊರತುಪಡಿಸಿ, ಇತರೆ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಆರೋಪಿತ ಸಿಬ್ಬಂದಿಗಳ ಮಾತೃ ಇಲಾಖೆಗಳಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಯೋಜನಾ ಇಲಾಖೆಯ ಸಹಮತಿಯನ್ನು ಕೋರಲಾಗಿದ್ದು, ಪ್ರಸ್ತಾಪಿತ ಇಲಾಖೆಗಳಿಂದ ಸಹಮತಿ ಸ್ವೀಕೃತವಾದ ನಂತರದಲ್ಲಿ ಇಲಾಖಾ ವಿಚಾರಣೆ ನಡೆಸುವ ಕುರಿತು ಕ್ರಮವಹಿಸಲಾಗುವುದು.

ಬ್ರಿಮ್ಸ್ನ ಹಿಂದಿನ ನಿರ್ದೇಶಕರಾದ ಡಾ:ಸಿ ಚನ್ನಣ್ಣ ಇವರನ್ನು ಇವರ ಮಾತೃ ಸಂಸ್ಥೆಯಾದ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬಳ್ಳಾರಿ ಇಲ್ಲಿಗೆ ಹಿಂದಿರುಗಿಸಲಾಗಿದೆ.

ಸಂಸ್ಥೆಯಲ್ಲಿ ಈ ಹಿಂದೆ ಮುಖ್ಯ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಅನಂದಸಾಗರ ರೆಡ್ಡಿ ಇವರು ವಯೋನಿವೃತ್ತಿ ಹೊಂದಿದ್ದು, ಸದರಿಯವರ ವಿರುದ್ಧ ವಿಚಾರಣೆ ಕೈಗೊಳ್ಳಲು ಇವರ ಮಾತೃ ಇಲಾಖೆಯಾದ ಯೋಜನಾ ಇಲಾಖೆಯಿಂದ ಸಹಮತಿ ಕೋರಲಾಗಿದೆ.

ಇನ್ನುಳಿದಂತೆ, ಈ ಕೆಳಕಂಡ ನೌಕರರುಗಳು ಮೂಲತಃ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೌಕರರಾಗಿದ್ದು ಇವರುಗಳನ್ನು ಮಾತೃ ಇಲಾಖೆಗೆ ಹಿಂದಿರುಗಿಸಲಾಗಿದೆ.

ಕ್ರ.ಸಂ	ಸಿಬ್ಬಂದಿ ಹೆಸರು	ಪದನಾಮ
1	ಶ್ರೀಮತಿ ಅನುಷಯಾ	ಸಹಾಯಕ ಆಡಳಿತಾಧಿಕಾರಿ
2	ಶ್ರೀ ಪ್ರಕಾಶ ಶರಣಪ್ಪ ಮಡಿವಾಳ	ಕಛೇರಿ ಅಧೀಕ್ಷಕರು
3	ಶ್ರೀ ಬಾಬು ಕೋಟೆ	ಕಛೇರಿ ಅಧೀಕ್ಷಕರು
4	ಶ್ರೀ ಪ್ರಕಾಶ ಮಾಳಗೆ	ಪ್ರಥಮ ದರ್ಜೆ ಸಹಾಯಕರು

		ಈ ಪೈಕಿ, ಶ್ರೀ ಪ್ರಕಾಶ ಶರಣಪ್ಪ ಮಡಿವಾಳ ಮತ್ತು ಶ್ರೀ ಪ್ರಕಾಶ ಮಾಳಗೆ ಇವರುಗಳು ಸದರಿ ವರ್ಗಾವಣೆ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯ, ಕಲಬುರ್ಗಿಪೀಠ ಇಲ್ಲಿ ರಿಟ್ ಪಿಟೀಷನ್ ಸಂ: 205160-61/2018ರ ಪ್ರಕರಣಗಳನ್ನು ದಾಖಲಿಸಿ, ತಡೆಯಾಜ್ಞೆಯನ್ನು ತಂದಿರುವುದರಿಂದ, ಸಂಸ್ಥೆಯ ಕರ್ತವ್ಯದಲ್ಲಿ ಮುಂದುವರೆದಿರುತ್ತಾರೆ. ಮಾನ್ಯ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಶ್ರೀ ಪ್ರಕಾಶ ಶರಣಪ್ಪ ಮಡಿವಾಳ ಮತ್ತು ಶ್ರೀ ಪ್ರಕಾಶ ಮಾಳಗೆ ಇವರುಗಳನ್ನು ಅವರು ಕಾರ್ಯನಿರ್ವಹಿಸುತ್ತಿದ್ದ ಶಾಖೆಯಿಂದ ಹಣಕಾಸಿನ ವ್ಯವಹಾರವಿಲ್ಲದ ಶಾಖೆಗಳಿಗೆ ಆಂತರಿಕ ಬದಲಾವಣೆ ಮಾಡಲಾಗಿರುತ್ತದೆ.

ಕಡತ ಸಂ: ಎಂಇಡಿ 97 ಎಂ ಎಸ್ ಎಫ್ 2020

(ಡಾ: ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು.